ಫಾರೆಸ್ಟ್.

ಪ್ರಸಿದ್ಧ ಪತ್ರಿಕೆ.

ತಾರೀಖು 30ನೆ ನವಂಬರ್ 1903.

ನಂ. 352—3783. ಸ್ಯ 1900ನೆ ಇಸವಿ 11ನೆ ನಂಬರ್ ಮೈಸೂರು ಫಾರೆಸ್ಟ್ ರಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನ್ನನುಸರಿಸಿ ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲ್‌ನಲ್ಲಿ ಸಮೂದು ಇರುವ ಚಕ್ಕುಬಂದಿಗೆ ಬಳಪಟ್ಟ ಜಂಗಲ್ ಪ್ರದೇಶವನ್ನು ಸ್ಯ 1904ನೆ ಇಸವಿ ಜನವರಿ ದಾಹೆ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟು ಎಂದು ತೀರ್ಮಾನಿಸಿ ಇಧಾರೆ.

ಷೆಡ್ಯೂಲ್.

ತಿಪ್ಪಸಂದ್ರ.	ತಾಲ್ಲೂಕು.	ಫಾರೆಸ್ಟ್ ಬ್ಲಾಕ್ ಹೆಸರು.	ವಿಸ್ತೀರ್ಣ. ಎ. ಗು.	ಚಕ್ಕುಬಂದಿ.
ತುಮಕೂರು.	ಕೊರ್ಟಗೆರೆ ಸಬ್ ತಾಲ್ಲೂಕು.	ಮದ್ದಿಂಗೆಸ್ಟೆ ಫಾರೆಸ್ಟ್ ಕೋಟೆಕಲ್ಲು ಬ್ಲಾಕಿನ ಪಡುವಣಕ್ಕೆ.	1649 17	ಉತ್ತರಕ್ಕೆ.—ಲೈನು ನೆಗಲಾಲಗ್ಯಾಮದ ಸರ್ವೆ 88ನೆ ನಂಬರು ನೈರುತ್ಯ ಮೂಲೆಯಿಂದ ಹೊರಟು ಅದೇ ನಂಬರು ದಕ್ಷಿಣ ಕಡೆ ಬೂದಗಾವಿ ಗ್ರಾಮದ ಸರ್ವೆ 29ನೆ ನಂಬರು ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಸರ್ವೆ 29 ಮತ್ತು 31ನೆ ನಂಬರುಗಳ ದಕ್ಷಿಣವಾಗಿ 32ನೆ ನಂಬರು ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ 32ನೆ ನಂಬರು ದಕ್ಷಿಣವಾಗಿ 33ನೆ ನಂಬರು ಪಶ್ಚಿಮವಾಗಿ 14ನೆ ನಂಬರು ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 14, 11 ಮತ್ತು 17ನೆ ನಂಬರುಗಳಿಗೆ ದಕ್ಷಿಣವಾಗಿ ಆಖೈರ್ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಬೂದಗಾವಿ ಗ್ರಾಮದ ಸರ್ವೆ 17, 7 ಮತ್ತು 6ನೆ ನಂಬರುಗಳ ಪೂರ್ವ ದಿಕ್ಕಿನಲ್ಲಿ ಹೊರಟು ಆಖೈರ್ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಬೂದಗಾವಿ ಗ್ರಾಮದ ಸರ್ವೆ 35, 39 ಮತ್ತು 38ನೆ ನಂಬರುಗಳ ದಕ್ಷಿಣ ಗಡಿಯಾದ "ನಾಲೆ" ಮೂಲಕ ಹೊರಟು ಆಖೈರ್ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ಕುಮಟೇನಹಳ್ಳಿ ಗ್ರಾಮದ ಸರ್ವೆ 11 ಮತ್ತು ಜಿಂಡೊಣ ಗ್ರಾಮದ 26 ಮತ್ತು 25ನೆ ನಂಬರುಗಳ ಪಶ್ಚಿಮವಾಗಿ ಹಾದು ಕೋಳಿಕಲ್ಲು ಸ್ಟೇಟ್ ಫಾರೆಸ್ಟು ಗಡಿಗೆ ಕೇರುತ್ತದೆ. ಅಲ್ಲಿಂದ ಅದೇ ಗಡಿಮೇಲೆ ಹೊರಟು ಕಾರಂಕೋಟೆ ಗ್ರಾಮದ ಸರ್ವೆ 66ನೆ ನಂಬರಿನ ವಾಯವ್ಯ ಮೂಲೆಗೆ ಕೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಕಾರಂಕೋಟೆ ಗ್ರಾಮದ ಸರ್ವೆ 53ನೆ ನಂಬರ್ ಉತ್ತರ ಭಾಗವಾಗಿ ಅದೇನಂಬರಿನ ವಾಯವ್ಯ ದಿಕ್ಕಿಗೆ ಕೇರಿ ಅಲ್ಲಿಂದ ಜಂಜರಾಮನಹಳ್ಳಿ ಗ್ರಾಮದ ಸರ್ವೆ 1ನೆ ನಂಬರಿನಲ್ಲಿ ಹೊರಟು ಅದೇ ಗ್ರಾಮದ ಸರ್ವೆ 60ನೆ ನಂಬರು ಪೂರ್ವ ಗಡಿಗೆ ಕೇರುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಜಂಜರಾಮನಹಳ್ಳಿ ಸರ್ವೆ 60ನೆ ನಂಬರು ಪೂರ್ವ ದಿಕ್ಕಾಗಿ ಮರನಾಯಿಕನಹಳ್ಳಿ ಸರ್ವೆ 42ನೆ ನಂಬರ್ ಪೂರ್ವ ದಿಕ್ಕಾಗಿ ಕಡೇ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ನೆಗಲಾಲ ಗ್ರಾಮದ ಸರ್ವೆ 102ನೆ ನಂಬರಿನಲ್ಲಿ ಈಶಾನ್ಯ ದಿಕ್ಕಿಗೆ ನೇರವಾಗಿ ಮೊದಲು ಹೊರಟ ಸ್ಥಳಕ್ಕೆ ಕೇರುತ್ತದೆ.

ಷರಾ.—ಕೆಳಗೆ ನಮೂದಿರುವ ದಾರಿಗಳು 4 ಗಜಗಳಿಗಿಂತ ಜಾಸ್ತಿಯಾಗಿ ಅಗಲವಿಲ್ಲದೆ ಜನಗಳು ತಿರುಗಾಡುವ ಬಗ್ಗೆ ಬಿಡಲ್ಪಟ್ಟು ಇರುತ್ತದೆ.

1. ಕಾರಂಕೋಟೆಯಿಂದ ಈಶ್ವರದೇವರ ಮತ್ತು ಶಿದ್ಧೇಶ್ವರದೇವರ ಗುಡಿಗಳಿಗೆ ಹೋಗುವ ದಾರಿ—ಈ ದಾರಿಯು ಕಾರಂಕೋಟೆ ಗ್ರಾಮದ ಸರ್ವೆ 53 ಮತ್ತು 52ನೆ ನಂಬರುಗಳ ಮಧ್ಯೆ ಡಿವಿಶನ್ ಲೈನಿನಲ್ಲಿ ಅದೇ ಗ್ರಾಮದ ಸರ್ವೆ 65ನೆ ನಂಬರಿನ ನೈರುತ್ಯ ಮೂಲೆಯಿಂದ 20 ಗಜದ ಫಾಸಲೆಯಲ್ಲಿ ಪುರುವಾಗಿ ಉತ್ತರ ಮತ್ತು ಸಾಮುವ್ಯದಿಂಗ್ಮುಖವಾಗಿ ಫಾರೆಸ್ಟಿನಲ್ಲಿ ಬಟ್ಟಪಪೆಲೆ ಇರುವ ಗುಡಿ ವರೆಗೆ 1958 ಗಜಗಳ ಫಾಸಲೆ ವರೆಗೆ ಹೋಗುತ್ತದೆ.

2. ಕುರಂಕೋಟೆಯಿಂದ ಈಶ್ವರದೇವರ ಗುಡಿಗೆ ಹೋಗುವ ದಾರಿ—ಈ ದಾರಿಯು ಕುರಂಕೋಟೆ ಗ್ರಾಮದ ಸರ್ವೆ 53 ಮತ್ತು 52ನೆ ನಂಬರುಗಳ ಮಧ್ಯೆ ಡಿವಾರ್ಕೇರ್ಷ ಲೈನಿನಲ್ಲಿ ಅದೇ ಗ್ರಾಮದ 53ನೆ ನಂಬರ್ ವಾಯವ್ಯ ಮೂಲೆಯಿಂದ 2 ಫರ್ಲಾಂಗು ದೂರದಲ್ಲಿ ಫಾರೆಸ್ಟ್ ಪ್ರವೇಶಮಾಡಿ 5 ಫರ್ಲಾಂಗು ದೂರ ವಾಯವ್ಯದಿಂಗ್ಮುಖವಾಗಿ ಸ್ಟೇಟ್ ಫಾರೆಸ್ಟಿನಲ್ಲಿ ಬಿಟ್ಟುದಮೇಲೆ, ಇರುವ ಗುಡಿ ವರಿಗೆ ಹೋಗುತ್ತದೆ.

3. ಜಂಜರಾಮನ ಹಳ್ಳಿಯಿಂದ ಈಶ್ವರದೇವರ ಗುಡಿಗೆ ಹೋಗುವ ದಾರಿ—ಈ ದಾರಿಯು ಜಂಜರಾಮನಹಳ್ಳಿ ಗ್ರಾಮದ ಸರ್ವೆ 1ನೆ ನಂಬರಿನಲ್ಲಿ ಹೋಗುವ ಡಿವಾರ್ಕೇರ್ಷ ಲೈನಿನಲ್ಲಿ ಕುರಂಕೋಟೆ ಗ್ರಾಮದ ಸರ್ವೆ 53ನೆ ನಂಬರಿನ ವಾಯವ್ಯ ಮೂಲೆಗೆ 2 ಫರ್ಲಾಂಗು ದೂರದಲ್ಲಿ ಫಾರೆಸ್ಟ್ ಪ್ರವೇಶ ಮಾಡಿ ಉತ್ತರದಿಂಗ್ಮುಖವಾಗಿ 2354 ಗಜಗಳ ಫಾಸಲೆ ಗುಡಿವರಿಗೆ ಹೋಗುತ್ತದೆ.

4. ನೆಗಲಾಲದಿಂದ ಶಿದ್ದೇಶ್ವರ ಗುಡಿಗೆ ಹೋಗುವ ದಾರಿ—ಈ ದಾರಿಯು ಖೊದಗಾವಿ ಗ್ರಾಮದ ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಯಿಂದ 110 ಗಜ ದೂರದಲ್ಲಿ ಜಂಗಲ್ ಪ್ರವೇಶ ಮಾಡಿ ಆಗ್ನೇಯದಿಂಗ್ಮುಖವಾಗಿ 1364 ಗಜಗಳ ಫಾಸಲೆ ಗುಡಿ ವರಿಗೆ ಹೋಗುತ್ತದೆ.

ತಾರೀಖು 30ನೆ ಡಿಸೆಂಬರ್ 1903.

ನಂ. 360—3791, ಸ್ಯ 1900ನೆ ಇಸವಿ 11ನೆ ನಂಬರು ಮೈಸೂರು ಫಾರೆಸ್ಟ್ ರೆಗ್ಯುಲೇರ್ಷ 17ನೆ ಸೆಕ್ಷನ್ನಿನ ವಿಧಿಗಳನ್ನನುಸರಿಸಿ ಕ್ಯಾರ್ಮೆ ಮೈಸೂರು ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಕ್ಕು ಬಂದಿಗೆ ಒಳಪಟ್ಟ ಪ್ರದೇಶವನ್ನು 1904ನೆ ಇಸವಿ ಜನವರಿ ಮಾಹೆ 1ನೆ ತಾರೀಖು ಲಾಗಾಯತು ಸ್ಟೇಟ್ ಫಾರೆಸ್ಟಾಗಿ ವಿಧಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹುಕಡಿ ಹೆಸರು.	ವಿಸ್ತೀರ್ಣ.	ಜಕ್ಕು ಬಂದಿ.
ತುಮಕೂರು.	ಮದ್ದಗಿರಿ ತಾಲ್ಲೂಕು ಮತ್ತು ಹೊರಟುಗೆರೆ ಸಬ್-ತಾಲ್ಲೂಕು	ಮದ್ದಗಿರಿ ಸ್ಟೇಟ್ ಫಾರೆಸ್ಟು ಬೀಟಾಜಿ	2284 ಎಕರೆ. 18 ಗುಂಟೆ.	ಉತ್ತರಕ್ಕೆ.—ಡಿವಾರ್ಕೇರ್ಷ ಲೈನು ಕಮ್ಮನಕೋಟೆ ಗ್ರಾಮದ ಸರ್ವೆ 43ನೆ ನಂಬರು ದಕ್ಷಿಣ ಮೂಲೆಯಲ್ಲಿ ಮದ್ದಗಿರಿ ಫಾರೆಸ್ಟಿನ ಡಿವಾರ್ಕೇರ್ಷ ಲೈನಿಂದ ಪ್ರಾರಂಭವಾಗಿ ಅದೇ ಗ್ರಾಮದ ಸರ್ವೆ 44 ಮತ್ತು 33ನೆ ನಂಬರುಗಳಲ್ಲಿ ಹೊರಟು ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 31 ಮತ್ತು 30ನೆ ನಂಬರುಗಳ ದಕ್ಷಿಣ ಗಡಿಯಲ್ಲಿ ಹೊರಟು ಈಡೇ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 30 ಮತ್ತು 28ನೆ ನಂಬರುಗಳ ಪೂರ್ವ ಗಡಿ ಮೇಲೆ ಹೊರಟು ಚಿನ್ನಕವಜ್ರದ ಗ್ರಾಮದ ಸರ್ವೆ 29ನೆ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ 29ನೆ ನಂಬರು ದಕ್ಷಿಣ ಗಡಿ ಮೇಲೆ ಹೊರಟು ಅದೇ ಗ್ರಾಮದ ಸರ್ವೆ 16ನೆ ನಂಬರ್ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ದಕ್ಷಿಣ ಗಡಿಮೇಲೆ ಹೊರಟು ಅದರ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 17 ಮತ್ತು 13 ನಂಬರುಗಳ ದಕ್ಷಿಣ ಗಡಿ ಮೇಲೆ ಹೊರಟು ಸರ್ವೆ 163ನೆ ನಂಬರ್‌ವರಿಗೂ ಹೋಗುತ್ತದೆ. ಅಲ್ಲಿಂದ ಅದೇ 163ನೆ ನಂಬರ್ ಮಧ್ಯೆ ಆಗ್ನೇಯದಿಂಗ್ಮುಖವಾಗಿ ಹೊರಟು ಅದೇ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ಚಿನ್ನಕವಜ್ರದ ಗ್ರಾಮದ ಸರ್ವೆ 59ನೆ ನಂಬರಿನಲ್ಲಿಯೂ ಮತ್ತು ದಾಸರಹಳ್ಳಿ ಮತ್ತು ಜೋಡಿ ಇನಾಂ ವಲಸವೀರನಹಳ್ಳಿ ಗಡಿಗಳಮೇಲೆಯೂ ಹೊರಟು ಚಿನ್ನರಾಯದುರ್ಗ, ಬೈರೇನಹಳ್ಳಿ ಮತ್ತು ವಲಸವೀರನಹಳ್ಳಿ ಈ ಮೂರು ಗ್ರಾಮಗಳ ಗಡಿ ಕೇರುವ ಸ್ಥಳಕ್ಕೆ ಕೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಚಿನ್ನರಾಯದುರ್ಗ ಗ್ರಾಮದ ಸರ್ವೆ 11ನೆ ನಂಬರಿನಲ್ಲಿ ಹೊರಟು ಸರ್ವೆ 10ನೆ ನಂಬರ್ ಈಶಾನ್ಯ ದಿಕ್ಕಿಗೆ ಕೇರುತ್ತದೆ. ಅಲ್ಲಿಂದ 1ನೆ ನಂಬರಿನ ಉತ್ತರ ಗಡಿ ಮೇಲೆ ಹೊರಟು ಆ ನಂಬರಿನ ವಾಯವ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ 1ನೆ ನಂಬರಿನ ಉತ್ತರ ಗಡಿಲಿ ಹೊರಟು ಅದೇ ಗ್ರಾಮದ ಸರ್ವೆ 63ನೆ ನಂಬರಿಗೆ ಕೇರುತ್ತದೆ. ಅಲ್ಲಿಂದ ಅದೇ ಗ್ರಾಮದ ಸರ್ವೆ 55, 63 ಮತ್ತು 73ನೆ ನಂಬರುಗಳ ಉತ್ತರ ಗಡಿ ಮೇಲೆ ಹೊರಟು ಈಡೇ ನಂಬರಿನ ವಾಯವ್ಯ ಮೂಲೆಯಲ್ಲಿ ಚಿನ್ನರಾಯದುರ್ಗ ಮತ್ತು ಮದ್ದಗಿರಿ ಸ್ಟೇಟ್ ಫಾರೆಸ್ಟು ಕೇರುವ ಗಡಿವರಿಗೆ ಹೋಗುತ್ತದೆ. ಅಲ್ಲಿಂದ ಮದ್ದಗಿರಿ ಸ್ಟೇಟ್ ಫಾರೆಸ್ಟಿಗೆ ಆಗ್ನೇಯ ದಿಕ್ಕಿನಲ್ಲಿ ಡಿವಾರ್ಕೇರ್ಷ ಲೈನಿಗೆ ಕೇರುತ್ತದೆ. ಪಶ್ಚಿಮಕ್ಕೆ.—ಮದ್ದಗಿರಿ ಸ್ಟೇಟ್ ಫಾರೆಸ್ಟು.

ಪರಾ.—ಕೆಳಗೆ ನಮೂದಿರುವ ದಾರಿಯನ್ನು ಆಗಲದಲ್ಲಿ 6 ಗಜಕ್ಕೆ ಜಾಸ್ತಿ ಇಲ್ಲದೆ ಜನಗಳಿಗೂ, ದನಗಳಿಗೂ ಮತ್ತು ಗಾಡಿಗಳಿಗೂ ಬಿಟ್ಟು ಇರುತ್ತೆ.

ಮದ್ದಗಿರಿಯಿಂದ ಚಿನ್ನರಾಯದುರ್ಗಕ್ಕೆ ಹೋಗುವ ದಾರಿ—ಈ ದಾರಿಯು ಚಿನ್ನಕವಜ್ರಗ್ರಾಮದ ಸರ್ವೆ 16ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಪ್ರಾರಂಭವಾಗಿ ದಕ್ಷಿಣದಿಂಗ್ಮುಖವಾಗಿ 2178 ಗಜ ಲಾಂಬ ಅದೇ ಗ್ರಾಮದ ಸರ್ವೆ 17ನೆ ನಂಬರಿನ ದಕ್ಷಿಣ ಮೂಲೆ ವರಿಗೆ ಹೋತ್ತದೆ.

30

ತಾರೀಖು 30ನೆ ನವಂಬರ್ 1903.

ನಂ. 356—3787, ಸನ್ 1900ನೆ ಇಸವಿ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗನ್ನನುಸರಿಸಿ ಮೈಸೂರ ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ಕೆಳಗೆ ಕಂಡ ಷೆಡ್ಯೂಲಿನಲ್ಲಿ ನಮೂದಿರುವ ಚಕ್ಕುಬಂದಿಗೆ ಒಳಪಟ್ಟ ಜಂಗಲ್ ಪ್ರದೇಶವನ್ನು 1904ನೆ ಇಸವಿ ಜನವರಿ ಮಾಹೆ 1ನೆ ತಾರೀಖು ಲಾಗಾಯಿತು ಸ್ಟೇಟ್ ಫಾರೆಸ್ಟೆಂದು ತೀರ್ಮಾನಿಸಿ ಇದ್ದಾರೆ.

ಷೆಡ್ಯೂಲ್.

ತಿಪ್ಪಗಾನ.	ತಾಲ್ಲೂಕು.	ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ತುನುಕೂರು.	ಕೊರಟಗೆರೆ ಸಬ್ ತಾಲ್ಲೂಕು.	911 ಎಕರೆ.	ಕವದಗಲ್.	ಉತ್ತರಕ್ಕೆ.—ಕರಿಯಮ್ಮನಹಳ್ಳಿ ಗ್ರಾಮದ ಸರ್ವೆ 2ನೆ ನಂಬರ್ ನೈರುತ್ಯ ಮೂಲೆಯಿಂದ ಲೈನು ಪ್ರಾರಂಭವಾಗಿ ಅದೇ ನಂಬರಿನ ದಕ್ಷಿಣ ದಿಕ್ಕಿನಲ್ಲಿ ಹೊರಟು ಸಂಗಾಪುರದ ಸರ್ವೆ 9ನೆ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಸಂಗಾಪುರದ 9ನೆ ನಂಬರು ಮತ್ತು ಬರ್ಕ ಗ್ರಾಮದ 71ನೆ ನಂಬರ್ ದಕ್ಷಿಣ ದಿಕ್ಕಿನಲ್ಲಿ ಹೊರಟು ಅದೇ ಗ್ರಾಮದ 48ನೆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಸರ್ವೆ 64ನೆ ನಂಬರಿನ ದಕ್ಷಿಣವಾಗಿ ಹೊರಟು ಆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅಗ್ರಹಾರಗ್ರಾಮದ ಗಡಿ ಮೇಲೆ ಹೊರಟು ತರಟಿರೊಪ್ಪದ ಸರ್ವೆ 65ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ.—ಅಲ್ಲಿಂದ ತರಟಿರೊಪ್ಪದ ಸರ್ವೆ 65ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಗಡಿ ಮೇಲೂ ಮತ್ತು ಸರ್ವೆ 116ನೆ ನಂಬರಿನ ಪಶ್ಚಿಮ ಗಡಿ ಮೇಲೂ ಹೊರಟು ಅಖ್ಯೆರ್ ನಂಬರಿನ ನೈರುತ್ಯ ಮೂಲೆಗೆ ಕೇರುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ತರಟಿರೊಪ್ಪದ ಸರ್ವೆ 69 ಮತ್ತು 67ನೆ ನಂಬರುಗಳ ಉತ್ತರ ಗಡಿ ಮೇಲೆ ಹೊರಟು ಆಖ್ಯೆರ್ ನಂಬರಿನ ವಾಯವ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ಗ್ರಾಮದ ಸರ್ವೆ 67ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಗಡಿಗಳ ಮೇಲೂ ಮತ್ತು ಸರ್ವೆ 67, 70, 78, 113ನೆ ನಂಬರುಗಳ ಪಶ್ಚಿಮ ಗಡಿ ಮೇಲೂ ಹೊರಟು ಸರ್ವೆ 114ನೆ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಗಡಿ ಮೇಲೂ ಸರ್ವೆ 83ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಗಡಿಗಳ ಮೇಲೂ ಹೊರಟು ಚನ್ನಪಟ್ಟ ಗ್ರಾಮದ ಸರ್ವೆ 7ನೆ ನಂಬರಿನ ಈಶಾನ್ಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಮತ್ತು ವಾಯವ್ಯ ಗಡಿಗಳ ಮೇಲೂ ಹೊರಟು ಅದೇ ಗ್ರಾಮದ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ 5ನೆ ನಂಬರಿನ ಈಶಾನ್ಯ, ಉತ್ತರ ಮತ್ತು ವಾಯವ್ಯ ಗಡಿಗಳ ಮೇಲೆ ಹೊರಟು ಕಂಬದಹಳ್ಳಿ ಗ್ರಾಮದ ಗಡಿ ಬಾಂದಿಗೆ ಸೇರುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಕಂಬದಹಳ್ಳಿ ಗ್ರಾಮದ ಸರ್ವೆ 15, 14, 13, 12, 1, 6 ಮತ್ತು 7ನೆ ನಂಬರುಗಳ ಪೂರ್ವಗಡಿ ಮೇಲೆ ಹೊರಟು ಅದೇ ಗ್ರಾಮದ ಸರ್ವೆ 8ನೆ ನಂಬರಿನ ಈಶಾನ್ಯಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ಉತ್ತರ ಗಡಿ ಮೇಲೆ ಹೊರಟು ಸರ್ವೆ 9ನೆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತದೆ. ಅಲ್ಲಿಂದ ಅದೇ ನಂಬರಿನ ಪೂರ್ವ ಗಡಿ ಮೇಲೆ ಹೊರಟು ಮೊದಲು ಲೈನ್ ಪ್ರಾರಂಭವಾದ ಸ್ಥಳಕ್ಕೆ ಹೋಗಿ ಕೇರುತ್ತದೆ.

ಪರಾ.—ಕೆಳಗೆ ನಮೂದಿರುವ ದಾರಿಗಳನ್ನು ಬಿಟ್ಟು ಇರುತ್ತದೆ.

1. ಕಂಬದಹಳ್ಳಿ ಗ್ರಾಮದ ರೈತರ ದನಗಳನ್ನು ಅವರ ಗೋಮಾಳ ಜಮೀನಿಗೆ ಹೋಗಲು ಅದೇ ಗ್ರಾಮದ ಸರ್ವೆ 11ನೆ ನಂಬರಿನ ಗಡಿ ಮೇಲೆ ಬರುವ ಡಿವಾರ್ಕೇರ್ಡ್ ಲೈನಿನಲ್ಲಿ ದಾರಿ ಬಿಟ್ಟು ಇರುತ್ತೆ. ಈ ದಾರಿಯು ಕಂಬದಹಳ್ಳಿ ಗ್ರಾಮದ ಸರ್ವೆ 13ನೆ ನಂಬರಿನ ಆಗ್ನೇಯ ದಿಕ್ಕಿನಲ್ಲಿ ಪೂರುವಾಗಿ ಅದೇ ಗ್ರಾಮದ ಸರ್ವೆ 10ನೆ ನಂಬರಿನ ಆಗ್ನೇಯ ಮೂಲೆ ವರಿಗೂ ಹೋಗುತ್ತದೆ. ಈ ದಾರಿಯು 792 ಗಜ ಲಾಂಬಿ ಮತ್ತು 22 ಗಜ ರುಂದಿ ಇರುತ್ತದೆ.

2. ಕಂಬದಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನಲ್ಲಿ ಇರುವ ದಾರಿ ಆ ಗ್ರಾಮದ ದನಗಳು ಕುಂಟೆಗೆ ನೀರು ಕುಡಿಯಲು ಹೋಗುವದಕ್ಕಾಗಿ 418ಗಜ ಲಾಂಬಿ 22ಗಜ ರುಂದಿ ಬಿಟ್ಟು ಇರುತ್ತೆ. ಈ ದಾರಿಯು ಮೇಲ್ಕಂಡ 10ನೆ ನಂಬರಿನ ಆಗ್ನೇಯ ಮೂಲೆಯಿಂದ ಹೊರಟು ಉತ್ತರದಿಂಗ್ಕು ಎನಾಗಿ ಬೊರಟು ಕುಂಟೆಗೆ ಕೇರುತ್ತದೆ.

3. ಕಂಬದಹಳ್ಳಿಯಿಂದ ಗೊಲ್ಲಹಳ್ಳಿಗೆ ಹೋಗಲು ಕಂಬದಹಳ್ಳಿ ಗ್ರಾಮದ 10ನೆ ನಂಬರಿನಲ್ಲಿ ಹಾಲಿ ಇರುವ ದಾರಿಯನ್ನು ಬಿಟ್ಟು ಇರುತ್ತೆ. ಈ ದಾರಿಯು ಅದೇ ಕಂಬದಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಫಾರೆಸ್ಟು ಪ್ರವೇಶವಾಡಿ ಉತ್ತರದಿಂಗ್ಕು ಎನಾಗಿ 836 ಗಜ ಹೊರಟು ಅದೇ ಸರ್ವೆ 10ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಫಾರೆಸ್ಟು ಬಿಟ್ಟು ಹೋಗುತ್ತದೆ.

ಹುಕುಂ ಬಮೋಜಿಬ್,

ಎಂ. ಮುತ್ತಣ್ಣ,

ಫಾರೆಸ್ಟು ಇಲಾಖೆಯ ಗೆವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.